ದಿನಾಂಕಃ 22-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ

8. ಸಾಕ್ಷಿ ಉಳ್ಳಾಗಡ್ಡಿ ವಕೀಲರಿಗೆ ತಾನು ಕೊಟ್ಟಂತಹ ವಕಾಲತ್ತನ್ನು ನೋಡಿ ಒಪ್ಪಿಕೊಂಡಿದ್ದರಿಂದ ನಿ ಆರ್ 1 ಎಂದು ಗುರುತಿಸಲಾಯಿತು. ವಕಾಲತ್ತ ಕೊಡುವಾಗ ನೋಟೀಸ ಬಂದಿತ್ತಾ ಎಂದರೆ ಇಲ್ಲ. ನನಗೆ ತಲಾಟಿಯವರು ಕರೆ ಮಾಡಿ ನೋಟೀಸ ವಿಚಾರ ತಿಳಿಸಿರುತ್ತಾರೆ. ಆ ರೀತಿ ಹೇಳಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸುತ್ತೀರಾ ಎಂದರೆ ಇಲ್ಲ. ಎಫ್ ಡಿ ಪಿ 3/2019 ರ ಅರ್ಜಿಯಲ್ಲಿ ತೋರಿಸಿದ ವಿಳಾಸಕ್ಕೆ ನೋಟಿಸ ಬಂದಿತ್ತು ತಲಾಟಿ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಿಯಂಕಾ ನನ್ನ ಮಗಳು. ಸದರಿ ಪ್ರಿಯಂಕಾಳನ್ನು ಸೇರಿ ನಮ್ಮ ಮನೆಯವರು ನನ್ನ ಮೇಲೆ ಮತ್ತು ಇತರರ ಮೇಲೆ ಶಿಗ್ಗಾಂವ ದಿವಾಣಿ ನ್ಯಾಯಲಾಯದಲ್ಲಿ ಅಸಲು ದಾವಾ ನಂಬರ 107/2023 ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವಾದಲ್ಲಿ ನಾನು 1 ನೇ ಪ್ರತಿವಾದಿ ಎಂದರೆ ಗೊತ್ತಿಲ್ಲ. ಸದರಿ ದಾವಾದ ಸಮನ್ಸ ಬಂದಿತ್ತಾ ಎಂದರ ಇಲ್ಲ. ಸದರಿ ದಾವಾದಲ್ಲಿ ನಾನು ವಕೀಲರ ಮೂಲಕ ಹಾಜರಾಗಿಲ್ಲ. ವಕೀಲರು ಸಾಕ್ಷಿಗೆ ಒಂದು ಸಹಿಯನ್ನು ತೋರಿಸಲಾಗಿ ಅದು ನನ್ನ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ನಾನು ಎಮ್ ಎಚ್ ಬೆಂಡಿಗೇರಿ ವಕೀಲರ ಮೂಲಕ ಸದರಿ ದಾವಾದಲ್ಲಿ ಹಾಜರಾಗಿದ್ದೇನೆ ಎಂದರೆ ಸುಳ್ಳು. ಸದರಿ ದಾವಾದ ಸಮನ್ಸ ಎಫ್ ಡಿ ಪಿ 3/2019 ರ ಅರ್ಜಿಯಲ್ಲಿ ತೋರಿಸಿದ ವಿಳಾಸಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನಾನು ಬೆಂಡಿಗೇರಿ ವಕೀಲರ ಮೂಲಕ ದಾವಾದಲ್ಲಿ ಹಾಜರಾಗಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಎಫ್ ಡಿ ಪಿ ನಂಬರ 3/2019 ರ ನೋಟೀಸ ನೋಂದಾಯಿತ ಅಂಚೆ ಮೂಲಕ ನನಗೆ ಬಂದಿತ್ತು ಎಂದರೆ ಸರಿಯಲ್ಲ. ನಾನು ಸದರಿ ನೋಟೀಸನ್ನು ಸ್ವಿಕಾರ ಮಾಡದೇ ವಾಪಸ್ಸು ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಎಫ್ ಡಿ ಪಿ ನಂಬರ 3/2019 ಪ್ರಕರಣದಲ್ಲಿ ಮನೆ ಮತುತ ಜಮೀನನ್ನು ಅಳತೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅಳತೆ ಮಾಡುವ ಪೂರ್ವದಲ್ಲಿ ನನಗೆ ನೋಟೀಸ ಕೊಟ್ಟು ಅಳತೆ ಮಾಡಿದ್ದಾರೆ ಎಂದರೆ ಸುಳ್ಳು. ಎಫ್ ಡಿ ಪಿ ನಂಬರ 3/2019 ಚಾಲ್ತಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿ ತಿಳಿದುಕೊಂಡು ಹೇಳುತ್ತೇನೆ ಎಂದು ನುಡಿಯುತ್ತಾರೆ. ಎಫ್ ಡಿ ಪಿ ನಂಬರ 3/2019 ನೋಟೀಸ ನನಗೆ ಬಂದಿಲ್ಲ ಎಂದು ಈ ಅರ್ಜಿ ಹಾಕಿದ್ದೇನೆ. ಹೊಲಕ್ಕೆ ಹೋದಾಗ ಆಜು ಬಾಜುದವರು

ಅಳತೆ ಮಾಡಿ ಹೋಗಿದ್ದಾರೆ ನಿಮಗೆ ಗೊತ್ತೈತಾ ಎಂದು ಕೇಳಿದಾಗ ಈ ಕೇಸ ಇರುವ ವಿಚಾರ ನನಗೆ ಗೊತ್ತಾಯಿತು. ಆ ನಂತರ ನ್ಯಾಯಾಲಯಕ್ಕೆ ಬಂದು ಪರೀಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಎಫ್ ಡಿ ಪಿ ನಂಬರ 3/2019 ರ ಪ್ರಕರಣ ಇಂದಿಗೂ ಚಾಲ್ತಿಯಲ್ಲಿದೆ. ಸದರಿ ಕೇಸನಲ್ಲಿ ವಕೀಲರ ಮೂಲಕ ಹಾಜರಾಗಿದ್ದೀರಾ ಎಂದರೆ ಇಲ್ಲ. ಎಫ್ ಡಿ ಪಿ ನಂಬರ 3/2019 ಪ್ರಕರಣ ಚಾಲ್ತಿಯಿದೆ ಎಂದು ಗೊತ್ತಿದ್ದರು ಏಕೆ ಹಾಜರಾಗಿಲ್ಲ ಎಂದರೆ ಸಾಕ್ಷಿ ಮೌನ ವಹಿಸಿರುತ್ತಾರೆ. ನಾನು ಉದ್ದೇಶ ಪೂರ್ವಕವಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಎಫ್ ಡಿ ಪಿ ನಂಬರ 3/2019 ರ ಪ್ರಕರಣದಲ್ಲಿ ಏನು ಆದೇಶ ಆಗಿದೆ ಎಂದು ಇಂದಿನವರೆಗೂ ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ನೋಡಿ ಹೇಳುತ್ತೇನೆ. ಎಫ್ ಡಿ ಪಿ ನಂಬರ 3/2019 ರಲ್ಲಿ ಪ್ರಾಥಮಿಕ ಹುಕುಂ ನಾಮೆಯ ಪ್ರಕಾರ ಅಳತೆ ಮಾಡಿ ಹಿಸ್ಸಾ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ಅನುಪಸ್ಥಿತಿಯಲ್ಲಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರರಿಗೆ ಆಸ್ತಿಯಲ್ಲಿ ಭಾಗ ಹೋದರೆ ನಿಮಗೆ ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿ ಮೌನವಹಿಸಿರುತ್ತಾರೆ. ಎಫ್ ಡಿ ಪಿ ನಂಬರ 3/2019 ರ ಪ್ರಕರಣದ ಆದೇಶದಿಂದ ನನಗೆ ಯಾವುದೇ ಅನ್ಯಾಯವಾಗಿಲ್ಲ ಎಂದರೆ ಆಗಿದೆ. ಏನಾದರೂ ಒಂದು ಕಾರಣದಿಂದ ಪ್ರಕರಣವನ್ನು ಮುಂದಕ್ಕೆ ತೆಗಹೆದುಕೊಂಡು ಹೋಗಬೇಕು ನನ್ನ ಸಹೋದರರ ಹಿಸ್ಸಾಕ್ಕೆ ಬಂದ ಸ್ವತ್ತನ್ನು ಅನುಭವಿಸಬಾರದು ಎಂದು ಈ ಅರ್ಜಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಎಫ್ ಡಿ ಪಿ ನಂಬರ 3/2019 ವಿಳಾಸದಲ್ಲಿದ್ದರು ಈ ಅರ್ಜಿಯಲ್ಲಿ ಸುಳ್ಳು ವಿಳಾಸ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆ ಖೊಟ್ಟೆ ದಾಖಲೆಗಳು ಎಂದರೆ ಸರಿಯಲ್ಲ. ಸುಳುಳ ಪ್ರಮಾ ಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,ಕುಂದಗೋಳ